ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 24–08–2021

# ಪತ್ರಿಕಾ ಪ್ರಕಟಣೆ

**PRESS RELEASE**

## ಸದೃಢ ರಾಷ್ಟ್ರ ನಿರ್ಮಾಣಕ್ಕೆ ಕೋವಿಡ್ ಲಸಿಕೆ ಪಡೆಯುವುದು ಅತ್ಯಗತ್ಯ: ಉಪರಾಷ್ಟ್ರಪತಿ

ಬೆಂಗಳೂರು ಆಗಸ್ಟ್ 24, (ಕರ್ನಾಟಕ ವಾರ್ತೆ):

ನಮ್ಮ ದೇಶ ಸದೃಢ ರಾಷ್ಟ್ರವಾಗಲು ದೇಶದ ಪ್ರತಿಯೊಬ್ಬ ನಾಗರಿಕನು ಕೋವಿಡ್-19 ಲಸಿಕೆ ಪಡೆಯಬೇಕು. ಕೋವಿಡ್ ಲಸಿಕೆ ಪಡೆಯುವುದರಿಂದ ಯಾವುದೇ ಅಡ್ಡಪರಿಣಾಮ ಇರುವುದಿಲ್ಲ ಎಂದು ಗೌರವಾನ್ವಿತ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಹೇಳಿದರು.

ಗೀವ್ ಇಂಡಿಯಾ ಸಂಸ್ಥೆ ಮತ್ತು ರಾಜ್ಯ ಸರ್ಕಾರ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಭಾರತ ಲಸಿಕಾ ಕಾರ್ಯಕ್ರಮಕ್ಕೆ ಗೌರವಾನ್ವಿತ ಉಪ ರಾಷ್ಟ್ರಪತಿಗಳಾದ ವೆಂಕಯ್ಯ ನಾಯ್ಡು ಅವರು ರಾಜಭವನದ ಬಾಂಕ್ವೆಟ್ ಸಭಾಂಗಣದಲ್ಲಿ ಇಂದು ಚಾಲನೆ ನೀಡಿ ನಂತರ ಮಾತನಾಡಿದ ಅವರು, ಖಾಸಗಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಸ್ವಯಂ ಪ್ರೇರಿತರಾಗಿ ಸರ್ಕಾರದ ಜೊತೆ ಕೋವಿಡ್ ಲಸಿಕಾ ಕಾರ್ಯಕ್ರಮಕ್ಕೆ ಕೈಜೋಡಿಸಿ ಜನಾಂದೋಲನವನ್ನು ಕೈಗೊಳ್ಳಬೇಕು ಎಂದು ಕರೆ ನೀಡಿದರು.

ಜನರಿಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಖಾಸಗಿ ಕಂಪನಿಗಳು, ಸರ್ಕಾರೇತರ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು, ಪುರಸಭೆ, ನಗರಸಭೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಪ್ರತಿಯೊಂದು ಸಂಸ್ಥೆ ತೊಡಗಿಸಿಕೊಳ್ಳಬೇಕು ಎಂದರು.

ಕೋವಿಡ್ ಮಹಾಮಾರಿಗೆ ಇಡೀ ವಿಶ್ವವೇ ತತ್ತರಿಸಿದೆ. ಕೋವಿಡ್ ಹಾವಳಿ ನಿರಂತರವಾಗಿದ್ದು, ಜನರು ಎಚ್ಚೆತ್ತುಕೊಂಡಿರಬೇಕು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಹಾಗೂ ಆರೋಗ್ಯ ಇಲಾಖೆಗಳು ಜಾರಿ ಮಾಡಿರುವಂತಹ ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆರೋಗ್ಯವೇ ಮಹಾಭಾಗ್ಯವೆಂದು ಅರಿತುಕೊಂಡು, ಮಾಸ್ಕ್ ಧರಿಸುವುದು, ಭೌತಿಕ ಅಂತರ ಕಾಪಾಡಿಕೊಳ್ಳುವುದು, ದೈಹಿಕ ವ್ಯಾಯಾಮ ಮಾಡುವುದರ ಜೊತೆಗೆ ಜಂಕ್ ಫುಡ್ ಸೇವಿಸುವುದನ್ನು ಕಡಿಮೆ ಮಾಡಬೇಕು. ಕರ್ನಾಟಕದ ಸಾಂಪ್ರದಾಯಿಕ ಆಹಾರವನ್ನು ಸೇವಿಸುವುದರಿಂದ ಆರೋಗ್ಯ ಉತ್ತಮವಾಗಿರುತ್ತದೆ ಎಂದ ಅವರು ಕರ್ನಾಟಕ ರಾಗಿ ಮುದ್ದೆ, ಬಸ್ಸಾರು ರುಚಿಕರ ಮತ್ತು ಆರೋಗ್ಯಕರ ಆಹಾರವಾಗಿದೆ ಎಂದು ಶ್ಲಾಘಿಸಿದರು.

ಘನತೆವೆತ್ತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿ, ಕಳೆದ ಎರಡು ವರ್ಷಗಳಿಂದ ವಿಶ್ವದ ಜೊತೆಗೆ ಭಾರತವು ಕೊರೊನಾ ಮಹಾಮಾರಿ ವಿರುದ್ಧ ಹೋರಾಡುತ್ತಿದೆ. ಬೃಹತ್ ಬಲಿಷ್ಠ ಮತ್ತು ಸಮೃದ್ಧ ದೇಶಗಳು ಸಹ ಕೊರೊನಾ ಹಾವಳಿಗೆ ತತ್ತರಿಸಿದವು, ಆದರೆ ಭಾರತದ ಪ್ರಧಾನಮಂತ್ರಿಯವರ ದೂರದೃಷ್ಟಿ ಮತ್ತು ದಕ್ಷ ನಿರ್ವಹಣೆಯಿಂದ ರಾಜ್ಯ ಸರ್ಕಾರ

ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಕೋರೋನಾ ನಿಯಂತ್ರಿಸುವಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯಶಸ್ವಿಯಾಗಿದ್ದು, ಇದರ ಪರಿಣಾಮವಾಗಿ ಭಾರತದಲ್ಲಿ ಚೇತರಿಕೆಯ ಪ್ರಮಾಣವು 97.62 ಶೇಕಡಾ ಮತ್ತು ಸಾವಿನ ಪ್ರಮಾಣವು ತುಂಬಾ ಕಡಿಮೆಯಾಗಿದೆ ಎಂದರು.

ಕರ್ನಾಟಕ ರಾಜ್ಯವು ಗಮನಾರ್ಹ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಕೋವಿಡ್ -19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡು ವಲ್ಲಿ ಹಾಗೂ ನಿಯಂತ್ರಿಸುವಲ್ಲಿ ಯಶಸ್ವಿಯಾಗಿದೆ. ಇಂದು ಕರ್ನಾಟಕ ರಾಜ್ಯದಲ್ಲಿ ಚೇತರಿಕೆಯ ಪ್ರಮಾಣವು ಶೇಕಡಾ 98 ರಷ್ಟಿದೆ ಮತ್ತು ಸಾವಿನ ಪ್ರಮಾಣವು ಶೇಕಡಾ 1.3 ರಷ್ಟಿದೆ ಎಂದ ಅವರು, ವಿಶ್ವದ ಅತಿದೊಡ್ಡ ಉಚಿತ ಲಸಿಕೆ ಅಭಿಯಾನ, ಎಲ್ಲರಿಗೂ ಲಸಿಕೆ - ಉಚಿತ ಲಸಿಕೆಯನ್ನು ಭಾರತ ಸರ್ಕಾರ ನಡೆಸುತ್ತಿದೆ.

ಇದನ್ನು ಜನವರಿ 16, 2021 ರಿಂದ ಆರಂಭಿಸಲಾಯಿತು, ಮೊದಲ ಹಂತದಲ್ಲಿ, ಆರೋಗ್ಯ ಕಾರ್ಯಕರ್ತರಿಗೆ ಲಸಿಕೆಯನ್ನು ನೀಡಲಾಯಿತು, ನಂತರ ಫೆಬ್ರವರಿ 8, 2021 ರಿಂದ, ಮುಂಚೂಣಿಯ ಕೆಲಸಗಾರರಿಗೆ ಲಸಿಕೆಯನ್ನು ನೀಡಲಾಯಿತು. ಎರಡನೇ ಹಂತದಲ್ಲಿ, ಮಾರ್ಚ್ 1, 2021 ರಿಂದ, 60 ವರ್ಷಕ್ಕಿಂತ ಮೇಲ್ಪಟ್ಟ ಜನರು ಮತ್ತು ಏಪ್ರಿಲ್ 1, 2021 ರಿಂದ, 45-59 ವಯಸ್ಸಿನ ಜನರನ್ನು ಪ್ರಾರಂಭಿಸಲಾಯಿತು. ಮೂರನೇ ಹಂತವು ಮೇ 1, 2021 ರಿಂದ 18-44 ವಯಸ್ಸಿನ ವ್ಯಕ್ತಿಗಳ ಲಸಿಕೆಯನ್ನು ಒಳಗೊಂಡಿದೆ. ಈ ಅಭಿಯಾನದ ಅಡಿಯಲ್ಲಿ, ಭಾರತದಲ್ಲಿ ಇದುವರೆಗೆ ಸುಮಾರು 59 ಕೋಟಿ ಡೋಸ್‌ಗಳನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಅಭಿಯಾನದ ಅಡಿಯಲ್ಲಿ, ಕರ್ನಾಟಕ ರಾಜ್ಯದಿಂದ 5848 ಕೇಂದ್ರಗಳ ಮೂಲಕ, 3 ಕೋಟಿ 73 ಲಕ್ಷಕ್ಕಿಂತ ಹೆಚ್ಚು ಡೋಸ್‌ಗಳನ್ನು ನೀಡಲಾಗಿರುವುದು ಶ್ಲಾಘನೀಯ. 2 ಮಿಲಿಯನ್‌ಗಿಂತಲೂ ಹೆಚ್ಚು ದಾನಿಗಳು ಮತ್ತು 250 ಪಾಲುದಾರರೊಂದಿಗೆ, ಗಿವ್ ಇಂಡಿಯಾ ದೇಶದಾದ್ಯಂತ 15 ಮಿಲಿಯನ್ ಜನರಿಗೆ ಸೇವೆ ಸಲ್ಲಿಸುತ್ತಿರುವುದು ಹರ್ಷದಾಯಕವಾಗಿದೆ. ಭಾರತ ಸರ್ಕಾರವು ಕೋವಿಡ್ -19 ಸಾಂಕ್ರಾಮಿಕ ರೋಗದಿಂದ ಎದುರಾಗುವ ಸವಾಲು ಮತ್ತು ಬೆದರಿಕೆಯನ್ನು ಎದುರಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ತಿಳಿಸಿದರು.

ಕೋವಿಡ್ -19 ರ ಪರಿಣಾಮಕಾರಿ ನಿಯಂತ್ರಣಕ್ಕಾಗಿ, ಕರ್ನಾಟಕ ಸರ್ಕಾರವು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದು, ಇದಕ್ಕೆ ಸಾರ್ವಜನಿಕರ ಭಾಗವಹಿಸುವಿಕೆಯಿಂದ ಕೊರೊನಾ ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟವನ್ನು ಬಲಪಡಿಸಲು ಸಾಧ್ಯ. ಉತ್ತಮ ಆರೋಗ್ಯ ಹೊಂದಿದ್ದರೇ ಮಾತ್ರ ರಾಜ್ಯ ಮತ್ತು ದೇಶದ ಪ್ರಗತಿಗೆ ಸಾಧ್ಯ. ನಾವೆಲ್ಲರೂ ಸೇರಿ ಕರ್ನಾಟಕ ರಾಜ್ಯದಲ್ಲಿ ಶೇ.100ರಷ್ಟು ಲಸಿಕಾ ಆಂದೋಲವನ್ನು ಯಶಸ್ವಿಗೊಳಿಸುವ ಪ್ರತಿಜ್ಞೆ ಮಾಡೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು  ಬಡವರು, ಕೆಳ ಹಂತದ ವರ್ಗದವರಿಗೆ ಲಸಿಕೆ ನೀಡುವುದು ನಮ್ಮ ಗುರಿ, ದಾನಿಗಳು ಹಾಗೂ ಖಾಸಗಿ ಸಂಸ್ಥೆಗಳು ಸಿ ಎಸ್ ಆರ್ ನಿಧಿ ಮೂಲಕ ಲಸಿಕೆ ನೀಡಲು ಮುಂದಾಗಬೇಕು ಎಂದ ಅವರು ಸರ್ಕಾರ ಹಾಗೂ ಸಮಾಜ ಒಟ್ಟಾಗಿ ಕೋವಿಡ್ ವಿರುದ್ಧ ಹೋರಾಡಬೇಕಿದೆ ಎಂದರು.

ಸೆಪ್ಟೆಂಬರ್ ಮಾಹೆಯಿಂದ ಪ್ರತಿ ದಿನ 5 ಲಕ್ಷ ಜನರಿಗೆ ಲಸಿಕೆ ನೀಡುವ  ಉದ್ದೇಶವಿದ್ದು, ಪ್ರಸ್ತುತ  3.5 ರಿಂದ  4 ಲಕ್ಷ  ಜನರಿಗೆ ಲಸಿಕೆ ನೀಡಲಾಗುತ್ತಿದೆ.  ಕೇಂದ್ರ ಸರ್ಕಾರದಿಂದ 1.5 ಕೋಟಿ ಲಸಿಕೆ ಪೂರೈಕೆಯಾಗುವ ನಿರೀಕ್ಷೆ ಇದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಗೌರವಾನ್ವಿತ ಉಪ ರಾಷ್ಟ್ರಪತಿಗಳಾದ ವೆಂಕಯ್ಯ ನಾಯ್ಡು ಅವರು ಕರ್ನಾಟಕದ ಅಭಿವೃದ್ಧಿಗೆ ಸದಾಕಾಲ ಚಿಂತನೆಯಲ್ಲಿರುತ್ತಾರೆ. ಈಗಾಗಲೇ ಕೋವಿಡ್ ಲಸಿಕೆ ವಿತರಣೆಯಲ್ಲಿ ಕರ್ನಾಟಕಕ್ಕೆ ಹೆಚ್ಚಿನ ರೀತಿಯಲ್ಲಿ ವಿತರಿಸುವಂತೆ ಕೇಂದ್ರ ಸರ್ಕಾರದೊಂದಿಗೆ ಮಾತನಾಡುತ್ತೇನೆಂದು ಹೇಳಿದ್ದು, ಕರ್ನಾಟಕದ ಸಂಪೂರ್ಣ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದಾಗಿ ಭರವಸೆ ನೀಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಕೂಡ ರಾಜ್ಯದ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದು, ಈ ಇಬ್ಬರು ಮಹಾನೀಯರ ಪ್ರೋತ್ಸಾಹಕ್ಕೆ ನಾನು ಅಭಾರಿಯಾಗಿದ್ದೇನೆಂದರು.

ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಸಮಾರಂಭದಲ್ಲಿ ಆರೋಗ್ಯ ಸಚಿವರಾದ ಡಾ ಕೆ ಸುಧಾಕರ್, ಯೋಜನಾ ಸಚಿವರಾದ ಮುನಿರತ್ನ, ಸಂಸದರಾದ ಪಿ ಸಿ ಮೋಹನ್, ಎಂಎಲ್ ಸಿ ವಿಜಯ್ ಪುಟ್ಟಸ್ವಾಮಿ, ಗೀವ್ ಇಂಡಿಯಾ ಸಂಸ್ಥಾಪಕರಾದ ಅತುಲ್ ಸತಿಜ, ಐಎಎಸ್ ಅಧಿಕಾರಿಗಳಾದ ಗೌರವ್ ಗುಪ್ತಾ, ವಂದಿತಾ ಶರ್ಮಾ, ಮಂಜುನಾಥ್ ಜೆ ಉಪಸ್ಥಿತರಿದ್ದರು.

ಛಾಯಾಚಿತ್ರ ಲಗತ್ತಿಸಿದೆ)

## ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಅಧಿಕೃತ ಲೋಗೊ ಬಿಡುಗಡೆ

ಬೆಂಗಳೂರು ಆಗಸ್ಟ್ 24 (ಕರ್ನಾಟಕ ವಾರ್ತೆ) :

ದೇಶವು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ಕೇಂದ್ರ ಸರ್ಕಾರವು ಅಧಿಕೃತ ಲೋಗೊ ಬಿಡುಗಡೆ ಮಾಡಿದೆ.

ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಒಟ್ಟು 6 ಮಾದರಿಯ ಲೋಗೊಗಳನ್ನು ಬಿಡುಗಡೆ ಮಾಡಿರುವ ಕೇಂದ್ರ ಸಂಸ್ಕೃತಿ ಇಲಾಖೆ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಿಸುವ ಕಾರ್ಯಕ್ರಮಗಳಲ್ಲಿ ಇದೇ ಲೋಗೊಗಳನ್ನು ಬಳಸಿಕೊಳ್ಳುವಂತೆ ಪತ್ರ ಬರೆದಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಲೋಗೊಗಳನ್ನು ವಿವಿಧ ಫಾರ್ಮೆಟ್ ಗಳಲ್ಲಿ ಬಿಡುಗಡೆ ಮಾಡಲಾಗಿದ್ದು, ಈ https://amritmahotsav.nic.in/logo.htm?QUERY ಮೂಲಕ ಹೈ ರೆಷೊಲೇಷನ್ ಹೊಂದಿದ, ಬೇಕಾದ ಮಾದರಿಯಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

ಛಾಯಾಚಿತ್ರ (ಲೋಗೊಗಳನ್ನು) ಲಗತ್ತಿಸಿದೆ)

## ಸಚಿವರ ಪ್ರವಾಸ

ಬೆಂಗಳೂರು ಆಗಸ್ಟ್ 24 (ಕರ್ನಾಟಕ ವಾರ್ತೆ) :

ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ವಿ.ಸೋಮಣ್ಣ ಅವರು ಆಗಸ್ಟ್ 25 ರಂದು ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂದಿರುಗಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದ್ದಾರೆ.

## ನೀರಿನ ಅದಾಲತ್

ಬೆಂಗಳೂರು ಆಗಸ್ಟ್ 24 (ಕರ್ನಾಟಕ ವಾರ್ತೆ) :

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಆಗಸ್ಟ್ 26 ಗುರುವಾರ ದಂದು (ದಕ್ಷಿಣ ವಿಲೇಜ್)–2, (ಆಗ್ನೇಯ–5), (ಪಶ್ಚಿಮ ವಿಲೇಜ್)–1, (ನೈರುತ್ಯ)–4, (ಪೂರ್ವ ವಿಲೇಜ್–3), (ಪೂರ್ವ ವಿಲೇಜ್–1), (ವಾಯುವ್ಯ–5), (ಈಶಾನ್ಯ–3) ಮತ್ತು (ಉತ್ತರ–1) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್ ಅನ್ನು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುವುದು.

ಅದಾಲತ್ ನಡೆಯುವ ಸ್ಥಳಗಳು (ದಕ್ಷಿಣ ವಿಲೇಜ್)–2 ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು, ಬೆಂಗಳೂರು ಸೇವಾಠಾಣೆಗಳು ಕೂಡ್ಲು, ಬೇಗೂರು ದೂರವಾಣಿ ಸಂಖ್ಯೆ 9845444090, (ಆಗ್ನೇಯ –5) ಕಪಿಲ ಭವನ, 1ನೇ ಮಹಡಿ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು–41 ಸೇವಾಠಾಣೆಗಳು ಜೆ.ಪಿ.ನಗರ–1 &3, ಜಯನಗರ 4ನೇ ಟಿ ಬ್ಲಾಕ್, ಜಯನಗರ 4ನೇ ಬ್ಲಾಕ್, ಹೊಂಬೇಗೌಡನಗರ, ಭೈರಸಂದ್ರ ದೂರವಾಣಿ ಸಂಖ್ಯೆ 7975173499 (ಪಶ್ಚಿಮ ವಿಲೇಜ್)–1 4ನೇ ಬ್ಲಾಕ್, ಬಿ.ಎಸ್.ಕೆ 6ನೇ ಹಂತ, ಪವನಪುರ, ರಾಘವೇಂದ್ರ ಸ್ವಾಮಿ ದೇವಸ್ಥಾನದ ಮುಂಭಾಗ, ಲಿಂಗಧೀರನಹಳ್ಳಿ, ಬೆಂಗಳೂರು–62 ಸೇವಾಠಾಣೆಗಳು ಲಿಂಗಧೀರನಹಳ್ಳಿ, ಹೆಮ್ಮಿಗೆಪುರ, ಬನಶಂಕರಿ 6ನೇ ಹಂತ. ದೂರವಾಣಿ ಸಂಖ್ಯೆ 9845444034 (ನೈರುತ್ಯ)–4 ಮೊದಲನೇ ಮಹಡಿ, ಬನಗಿರಿನಗರ, ವಾಟರ್ ಟ್ಯಾಂಕ್ ಪಕ್ಕ, ಬನಶಂಕರಿ 3ನೇ ಹಂತ, 1ನೇ

ಮುಖ್ಯರಸ್ತೆ, ಬೆಂಗಳೂರು-85. ಸೇವಾತಾಣೆಗಳು ಬನಗಿರಿನಗರ, ಬಿ.ಎಸ್.ಕೆ -1 &2, ಕುಮಾರಸ್ವಾಮಿ ಲೇಔಟ್, ಇಸ್ರೋ ಲೇಔಟ್, ಪೂರ್ಣ ಪ್ರಜ್ಞಾ ಲೇಔಟ್. ದೂರವಾಣಿ ಸಂಖ್ಯೆ 22945198, (ಪೂರ್ವ ವಿಲೇಜ್-3) ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು, ಹೊಸ ರಸ್ತೆ, ಅರಳೂರು, ಬೆಂಗಳೂರು ಸೇವಾತಾಣೆಗಳು ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನಹಳ್ಳಿ ದೂರವಾಣಿ ಸಂಖ್ಯೆ 9686566945, (ಪೂರ್ವ ವಿಲೇಜ್-1) ಬಂಜಾರ ಲೇಔಟ್, ಎಸ್.ಟಿ.ಪಿ ಆವರಣ, ಹೊರಮಾವು ಇಲ್ಲಿ ನಡೆಯಲಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ ಸಹಾಯವಾಣಿ 1916 ಹಾಗೂ ವಾಟ್ಸ್ಆಪ್ ಸಂಖ್ಯೆ: 8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಹಾಗೂ ಕೋವಿಡ್-19 ನ ಮರುತೆರವು ಮಾರ್ಗಸೂಚಿಯನ್ವಯ ಸಭೆಗೆ ಹಾಜರಾಗಲಿರುವ ಸಂದರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು ಎಂದು ಪ್ರಕಟಣೆ ತಿಳಿಸಿದೆ.

## ಕೃವಿವಿ: ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಮತ್ತು ಡಿಪ್ಲೊಮಾ(ರೇಷ್ಮೆ ಕೃಷಿ) ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು ಆಗಸ್ಟ್ 24 (ಕರ್ನಾಟಕ ವಾರ್ತೆ):

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ 2021-22ನೇ ಸಾಲಿನ ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಮತ್ತು ಡಿಪ್ಲೊಮಾ(ರೇಷ್ಮೆ ಕೃಷಿ) ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಡಿಪ್ಲೊಮಾ (ಕೃಷಿ) ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯದಲ್ಲಿ ಮತ್ತು ಡಿಪ್ಲೊಮಾ (ರೇಷ್ಮೆ ಕೃಷಿ), ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿಯಲ್ಲಿರುತ್ತವೆ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾಷೆಯಾಗಿ ಅಭ್ಯಸಿಸಿ ಕನಿಷ್ಠ ಶೇ.45 ಅಂಕಗಳೊಂದಿಗೆ ಉತ್ತೀರ್ಣರಾಗಿ (ಪ.ಜಾ./ಪ.ಪಂ./ಪ್ರವರ್ಗ-I ರವರುಗಳಿಗೆ ಕನಿಷ್ಠ ಶೇ.40 ಅಂಕಗಳು). ಏಪ್ರಿಲ್, 2021 ರಂದು 19 ವರ್ಷ ಮೀರಿರದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ರೈತರ ಹಾಗು ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ. ಅಭ್ಯರ್ಥಿಗಳು (ಸಾಮಾನ್ಯ ವರ್ಗ-ರೂ.500/- ಮತ್ತು ಪ.ಜಾ./ಪ.ಪಂ./ಪ್ರವರ್ಗ-1 ರೂ.250/-) ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಡಿ.ಡಿ.ಯನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಬೆಂಗಳೂರು-560 065 ರವರ ಹೆಸರಿನಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು-560 065 ರವರಿಗೆ ದಿನಾಂಕ:22-09-2021ರ ಒಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸುವುದು.

ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವೆಬ್‌ಸೈಟ್ www.uasbangalore.edu.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ಪ್ರವೇಶಕ್ಕೆ ಆಯ್ಕೆ ಮಾಡಿ, ಆಯ್ಕೆಯಾದ ಅಭ್ಯರ್ಥಿಗಳಿಗೆ ಪತ್ರ ಹಾಗೂ ವೆಬ್ ಸೈಟ್ ಮುಖಾಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080-23330149ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಕೆ.ಎಸ್.ಆರ್.ಟಿ.ಸಿ ಅಂತರ ನಿಗಮ ವರ್ಗಾವಣೆ

ಬೆಂಗಳೂರು ಆಗಸ್ಟ್ 24 (ಕರ್ನಾಟಕ ವಾರ್ತೆ):

ಪ್ರಥಮ ಬಾರಿಗೆ ಸರ್ಕಾರವು ನೌಕರರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂ.ಮ.ಸಾ.ಸಂಸ್ಥೆ, ಕ.ಕ.ರ.ಸಾ.ಸಂಸ್ಥೆ ಮತ್ತು ವಾ.ಕ.ರ.ಸಾ.ಸಂಸ್ಥೆಗಳ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರ ನೌಕರರಿಗೆ ಪ್ರತಿ ವರ್ಷ ಅಂತರ ನಿಗಮ ವರ್ಗಾವಣೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ ರವರ ಅಧ್ಯಕ್ಷತೆಯಲ್ಲಿ ಹಾಗೂ ಇತರೆ

ಸಾರಿಗೆ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರನ್ನೊಳಗೊಂಡ ಅಧಿಕಾರಯುತ ಸಮಿತಿಯನ್ನು ರಚಿಸಿ ವರ್ಗಾವಣೆಗೆ ನಿರ್ದಿಷ್ಟ ಮಾನದಂಡಗಳನ್ನು ಸರ್ಕಾರವು ನಿಗಧಿಪಡಿಸಿರುತ್ತದೆ.

ಇಂದು ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಕರ್ನಾಟಕ ಸರ್ಕಾರರವರು ವಿಧಾನಸೌಧದಲ್ಲಿ ವರ್ಗಾವಣೆ ಪಟ್ಟಿಯನ್ನು ಆನ್ಲೈನ್ ಮೂಲಕ ಬಿಡುಗಡೆ ಮಾಡಿದರು.

ದರ್ಜೆ–3 ಮೇಲ್ವಿಚಾರಕೇತರ ಮತ್ತು ದರ್ಜೆ–4 ರ ನೌಕರರ ಅಂತರ ನಿಗಮ ವರ್ಗಾವಣೆಗೆ ಕಾನೂನುಗಳನ್ವಯ ಅವಕಾಶವಿರುವುದಿಲ್ಲವೆಂದು 2009 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಿಸಿದ್ದ ಕಾರಣ ಅಂತರ ನಿಗಮ ವರ್ಗಾವಣೆಯನ್ನು ಸ್ಥಗಿತಗೊಳಿಸಲಾಗಿತ್ತು. ತದನಂತರ, ರಾಜ್ಯ ಸರ್ಕಾರವು 2017ನೇ ಸಾಲಿನಲ್ಲಿ ಒಂದು ಬಾರಿ ಪರಿಹಾರವಾಗಿ ಕೋರಿಕೆ ಮೇರೆಗೆ ಅಂತರ ನಿಗಮ ವರ್ಗಾವಣೆ ಅವಕಾಶ ಕಲ್ಪಿಸಿದ್ದು, ಅದರಂತೆ ವರ್ಗಾವಣೆ ಮಾಡಲಾಗಿತ್ತು.

2021–22 ನೇ ಸಾಲಿನಲ್ಲಿ ಅಂತರ ನಿಗಮ ವರ್ಗಾವಣೆಗೆ ಒಟ್ಟು 7,354 ಅರ್ಜಿಗಳು ಸ್ವೀಕೃತವಾಗಿದ್ದು, 4,854 ನೌಕರರು ನಿಗಧಿತ ಅರ್ಹತೆಯನ್ನು ಹೊಂದಿರುತ್ತಾರೆ. ಸಂಭವನೀಯ ವರ್ಗಾವಣಾ ಪಟ್ಟಿಯನ್ನು ದಿನಾಂಕ:19.08.2021ರಂದು ಪ್ರಕಟಿಸಿ, ಆಕ್ಷೇಪಣೆಗಳನ್ನು ಕೂಡ ಸ್ವೀಕರಿಸಿ, ಅದರಂತೆ, ಸಂಸ್ಥೆವಾರು ಈ ನೌಕರರು ವರ್ಗಾವಣೆಗೆ ಅರ್ಹರಾಗಿರುತ್ತಾರೆ.

| ಒಳಗೆ/ಹೊರಗೆ | ಕರಾರಸಾನಿಗಮ | ಬೆಂಮಸಾಸಂಸ್ಥೆ | ವಾಕರಸಾಸಂಸ್ಥೆ | ಕಕರಸಾಸಂಸ್ಥೆ | ಒಟ್ಟು |
|---|---|---|---|---|---|
| ಕರಾರಸಾನಿಗಮ | ---- | 37 | 654 | 292 | **983** |
| ಬೆಂಮಸಾಸಂಸ್ಥೆ | 187 | ---- | 364 | 77 | **628** |
| ವಾಕರಸಾಸಂಸ್ಥೆ | 143 | 31 | ---- | 231 | **405** |
| ಕಕರಸಾಸಂಸ್ಥೆ | 98 | 10 | 241 | ---- | **349** |
| ಒಟ್ಟು | **428** | **78** | **1,259** | **600** | **2,365** |

ಈ ಸಂದರ್ಭದಲ್ಲಿ ರಾಜೇಂದರ್ ಕುಮಾರ್ ಕಠಾರಿಯಾ ಭಾಆಸೇ, ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಹಾಗೂ ಶಿವಯೋಗಿ ಸಿ.ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಆರ್ಟಿಸಿ ರವರುಗಳು ಉಪಸ್ಥಿತರಿದ್ದರು.

# KSRTC Inter-Corporation Transfer

**Bengaluru, August 24, (Karnataka Information):**

The inter-corporation transfer in respect of Class III non-supervisory and Class IV employees was stopped in the year 2009 as thereis no legal provision as per orders of Hon'ble High Court. Thereafter, the State Government made provision for inter-corporation transfer on request of Class III non-supervisory and Class IV employeesin the year 2017as a one time measure, accordingly employees were transferred.

Presently, for the first time State Government has made provision for inter-corporation transfers every year vide order No. TD 45 TCS 2020 dated 09-03-2021 and No. TD 45 TCS 2020 dated 23-03-2021 and constituted

empowered committee chaired by Managing Director, KSRTC and Managing Directors of other three Corporations as members. Government has also specified terms and conditions for the same.

As per above orders, total of 7,354 applications were receivedfor the year 2021-22 out of which 4,854 employees have possessed specified eligibility. The provisional eligible transfer list of employees has been published on 19-08-2021, and objections are invited for the same. Accordingly, Corporation-wise employees' eligible for transfer is as below.

| **In / Out** | **KSRTC** | **BMTC** | **NWKRTC** | **KKRTC** | **Total** |
|---|---|---|---|---|---|
| **KSRTC** | ---- | 37 | 654 | 292 | 983 |
| **BMTC** | 187 | ---- | 364 | 77 | 628 |
| **NWKRTC** | 143 | 31 | ---- | 231 | 405 |
| **KKRTC** | 98 | 10 | 241 | ---- | 349 |
| **Total** | 428 | 78 | 1,259 | 600 | 2,365 |

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯು ಗುಣಮಟ್ಟ ಸೂಚ್ಯಂಕ

ಬೆಂಗಳೂರು ಆಗಸ್ಟ್ 24 (ಕರ್ನಾಟಕ ವಾರ್ತೆ) :

**ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 24.8.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 34 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 50 | ಉತ್ತಮ | Ozone |
| 3 | ಕವಿಕ, ಮೈಸೂರುರಸ್ತೆ | 54 | ತೃಪ್ತಿಕರ | $PM_{2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 42 | ಉತ್ತಮ | Ozone |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 50 | ಉತ್ತಮ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 52 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 55 | ತೃಪ್ತಿಕರ | $PM_{10}$ |
| **(24.8.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 51 | ತೃಪ್ತಿಕರ | $PM_{10}$ |
| 9 | ಪೀಣ್ಯ | 54 | ತೃಪ್ತಿಕರ | $PM_{10}$ |
| 10 | ಬಿಟಿಎಂ ಲೇಔಟ್ | 47 | ಉತ್ತಮ | $PM_{10}$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 24.8.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 34 | Good | $PM_{10}$ |
| 2 | Jayanagar 5th Block, Shalini ground | 50 | Good | Ozone |
| 3 | KAVIKA, Mysore Road | 54 | Satisfactory | $PM_{2.5}$ |
| 4 | Rajeev Gandhi Institute of Chest Disease, NIMHANS, Hombegowda Nagar | 42 | Good | Ozone |
| 5 | HSR Layout, near Central Silkboard | 50 | Good | $PM_{10}$ |
| 6 | City Railway Station, Magestic, Bengaluru | 52 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 55 | Satisfactory | $PM_{10}$ |
| **(24.8.2021 at 11.05 AM)** | | | | |
| 8 | BWSSB, Kadabesanahalli | 51 | Satisfactory | $PM_{10}$ |
| 9 | Peenya | 54 | Satisfactory | $PM_{10}$ |
| 10 | BTM Layout | 47 | Good | $PM_{10}$ |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |